ಸಹಾಯನುದಾನವನ್ನು ಪಡೆಯಲಾಗುತ್ತಿದೆ. ಮೂರು ಜಿಲ್ಲಾ ಸಾರ್ವಜನಿಕ ಆಲೋಪತಿ ಆಸ್ಪತ್ರೆಗಳಲ್ಲಿ ಭಾರತ ಸರ್ಕಾರದಿಂದ ಪ್ರತಿ ಆಸ್ಪತ್ರೆಗೆ ರೂ. 35.00 ಲಕ್ಷಗಳ ಸಹಾಯಾನುದಾನ ಪಡೆದು ಪಂಚಕರ್ಮ ವಿಭಾಗಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಪದವಿ ಕಾಲೇಜುಗಳಿಗೆ ವಿದ್ಯಾರ್ಥಿಗಳ ಆಯ್ಕೆಯನ್ನು ಸಿಇಟಿ ಮೂಲಕ ಮಾಡಲಾಗುತ್ತಿದೆ.

ಆ) ಆಯುರ್ವೇದ ವೈದ್ಯಪದ್ಧತಿಯನ್ನು ರಾಜ್ಯಾದ್ಯಂತ ಜನಪ್ರಿಯಗೊಳಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಮೈಸೂರಿನಲ್ಲಿ ಪಂಚಕರ್ಮ ಹೈಟೆಕ್ ಆಸ್ಪತ್ರೆ ಪ್ರಾರಂಭಿಸುವುದು.
2. ಸರ್ಕಾರಿ ಕಾಲೇಜುಗಳಲ್ಲಿ ಭಾರತ ಸರ್ಕಾರದ ಅನುದಾನದಡಿ ಇನ್ನೂ 6 ಸ್ನಾತಕೋತ್ತರ ಕೋರ್ಸ್ ಪ್ರಾರಂಭಿಸುವುದು.
3. ಸರ್ಕಾರಿ ಕಾಲೇಜುಗಳಲ್ಲಿ ಡಿಜಿಟಲ್ ಲೈಬ್ರರಿ ಅನುಷ್ಠಾನಗೊಳಿಸುವುದು.
4. ಎಲ್ಲ ಸರ್ಕಾರಿ ಕಾಲೇಜುಗಳಿಗೆ ಸ್ವಂತ ಕಟ್ಟಡ ಮತ್ತು ಹಾಸ್ಟೆಲ್ ನಿರ್ಮಾಣ ಮಾಡಲಾಗುವುದು.
5. ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿರುವ ಸಾರ್ವಜನಿಕ ಆಲೋಪತಿ ಆಸ್ಪತ್ರೆಗಳಲ್ಲಿ ಆಯುಷ್ ಚಿಕಿತ್ಸಾ ವಿಭಾಗಗಳನ್ನು ಭಾರತ ಸರ್ಕಾರದ ಅನುದಾನ ಪಡೆದು ಪ್ರಾರಂಭಿಸುವುದು.
6. ಮೈಸೂರಿನಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗಾದಲ್ಲಿ ಪದವಿ ಕಾಲೇಜನ್ನು ಪ್ರಾರಂಭಿಸಲಾಗಿದ್ದು, ಅದನ್ನು ಇನ್ನೂ ಅಭಿವೃದ್ಧಿಪಡಿಸುವುದು.

572 (685) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರಿನ ಕೆ.ಆರ್. ಆಸ್ಪತ್ರೆಯ ವತಿಯಿಂದ ಆಸ್ಪತ್ರೆಯ ಅಭಿವೃದ್ಧಿಗಾಗಿ ಸರ್ಕಾರದ ಅನುಮತಿಗಾಗಿ ಕಳುಹಿಸಲಾಗಿರುವ ಪ್ರಸ್ತಾವನೆಗಳಾವುವು;

ಆ) ಅವುಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಕಳುಹಿಸಲಾಗಿದೆ; ಸದರಿ ಪ್ರಸ್ತಾವನೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳಾವುವು;

ಇ) ಕೆ.ಆರ್. ಆಸ್ಪತ್ರೆಯ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಕೈಗೊಳ್ಳಲಾಗಿರುವ ಕ್ರಮಗಳಾವುವು?

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :

ಅ)

1. ಪಾರಂಪರಿಕ ಮಹತ್ವ ಹೊಂದಿರುವ ಕೆ.ಆರ್. ಆಸ್ಪತ್ರೆ ಕಟ್ಟಡಕ್ಕೆ ಕಾಯಕಲ್ಪ ನೀಡುವ ಬಗ್ಗೆ.

2. ಕೆ.ಆರ್. ಆಸ್ಪತ್ರೆ ಉನ್ನತೀಕರಣ ಮತ್ತು ತುರ್ತು ಸೇವೆಗಳ (ಟ್ರೌಮಾ ಕೇರ್ ಸೆಂಟರ್) ಬಲವರ್ಧನೆ ಯೋಜನೆ ಬಗ್ಗೆ.
3. 24 ಗಂಟೆಗಳ ನಿರಂತರ ಪ್ರಯೋಗ ಶಾಲೆ ಪ್ರಾರಂಭಿಸುವ ಬಗ್ಗೆ.

ಆ)

1. ಕೆ.ಆರ್. ಆಸ್ಪತ್ರೆಯ ಕಟ್ಟಡವು ಪಾರಂಪರಿಕ ಮಹತ್ವ ಹೊಂದಿದ್ದು, ಆ ಕಟ್ಟಡಕ್ಕೆ ಕಾಯಕಲ್ಪ ನೀಡುವ ಬಗ್ಗೆ ಆಯುಕ್ತರು, ಪ್ರಾಚ್ಯ ವಸ್ತು ಇಲಾಖೆ, ಮೈಸೂರು ರವರು ಸಲ್ಲಿಸಿದ ಪ್ರಸ್ತಾವನೆಯಲ್ಲಿನ ಯೋಜನೆಗೆ ಸಂಬಂಧಿಸಿದಂತೆ ವಿವರ ಸಲ್ಲಿಸಲು ಪ್ರಾಚ್ಯ ವಸ್ತು ಇಲಾಖೆಯನ್ನು ಕೋರಿದಾಗ್ಯೂ, ಅವರಿಂದ ಯಾವುದೇ ವಿವರ ಸ್ವೀಕೃತವಾಗಿರುವುದಿಲ್ಲ. ಆದಾಗ್ಯೂ ಸದರಿ ಯೋಜನೆಯ ಬಗ್ಗೆ ಅವರು ಕ್ರಮ ಕೈಗೊಂಡ ಬಗ್ಗೆ ವಿಚಾರಿಸಿದಾಗ ಪ್ರಸ್ತುತ ಯೋಜನೆಯನ್ನು ಜೆ.ಎನ್.ಯು.ಆರ್.ಎಂ. ಯೋಜನೆ ಅಡಿಯಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವನ್ನು ನೇರವಾಗಿ ಕೋರಲಾಗುವುದೆಂದು ಅವರು ತಿಳಿಸಿರುತ್ತಾರೆ.
2. ಕೇಂದ್ರ ಸರ್ಕಾರದ ಸಹಾಯನುದಾನದಲ್ಲಿ ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.
3. 2006–07ನೇ ಸಾಲಿಗೆ ಕೆ.ಆರ್. ಆಸ್ಪತ್ರೆಯಲ್ಲಿ 24 ಗಂಟೆ ಕೇಂದ್ರೀಯ ಪ್ರಯೋಗ ಶಾಲೆಯನ್ನು ಪ್ರಾರಂಭಿಸಬೇಕಾಗಿರುವುದರಿಂದ ಪ್ರಯೋಗ ಶಾಲೆಗೆ ಬೇಕಾದ ಉಪಕರಣಗಳನ್ನು ಖರೀದಿಸುವ ಅಧಿಕಾರಯುಕ್ತ ಸಮಿತಿಯು ಅನುಮೋದಿಸಿದೆ, ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುತ್ತಿದೆ.

ಇ) ಮೇಲಿನಂತೆ.

573 (891) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊಸ ಎಸ್.ಸಿ. ಎಸ್.ಟಿ. ವಸತಿ ನಿಲಯಗಳನ್ನು ಸರ್ಕಾರ ಮಂಜೂರು ಮಾಡುವುದೇ;

ಆ) ರಾಜ್ಯದಲ್ಲಿ ಹೊಸ ಎಸ್.ಸಿ. ಎಸ್.ಟಿ. ವಸತಿ ನಿಲಯಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರದ ಮುಂದಿರುವ ಪ್ರಸ್ತಾವನೆಗಳೆಷ್ಟು;

ಇ) ಪ್ರಸ್ತಾಪಿತ ಈ ಎಸ್.ಸಿ. ಎಸ್.ಟಿ. ವಸತಿ ನಿಲಯಗಳಲ್ಲಿ ಮೆಟ್ರಿಕ್ ಪೂರ್ವ ಬಾಲಕರ ಬಾಲಕಿಯರ ಹಾಗೂ ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ವಸತಿ ನಿಲಯಗಳ ಸಂಖ್ಯೆ ಎಷ್ಟು;